ಕಾನೂನು ಬಂದು ಇಂಪ್ಲಿಮೆಂಟ್ ಆಗಿದೆ ಜನ ಸ್ವಾಗತ ಮಾಡಿದ್ದಾರೆ. ಇತ್ತೀಚೆಗೆ ಕೆಲವು ಜಿಲ್ಲೆಗಳಿಂದ ಒಂದು ಅಭಿಪ್ರಾಯ ಬಂದಿದೆ. ತೊಂದರೆಯಾಗಿದೆ ಎಂದು ಹೇಳುತ್ತಿದ್ದಾರೆ, ಇದರ ಬಗ್ಗೆ ಕೃಷಿ ವಿಶ್ವ ವಿದ್ಯಾಲಯದವರ ಅಭಿಪ್ರಾಯ ಅವಶ್ಯವಿದೆ. ಅದರ ಬಗ್ಗೆ ವರದಿ ಬಂದ ಮೇಲೆ ಪುನರ್ ವಿಚಾರ ಮಾಡುತ್ತೇವೆ.

ಶ್ರೀ ಡಿ. ಎ. ಚಿನ್ನಪ್ಪ.—ಕೃಷಿ ವಿಶ್ವವಿದ್ಯಾಲಯದವರು ವೆಟ್ ಲ್ಯಾಂಡ್ ಬಗ್ಗೆ ಮಾಹಿತಿ ಕೊಡುತ್ತಾರೆಯೇ ವಿನಹ ಡ್ರೈಲ್ಯಾಂಡ್ ಮತ್ತು ಗುಡ್ಡಗಾಡು ಭೂಮಿ ಬಗ್ಗೆ ಮಾಹಿತಿ ಕೊಡುವು-ದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲ್ಲಾ ಭೂವಿಂಯ ಬಗ್ಗೆ ವಿಚಾರ ಮಾಡಲಿಕ್ಕೆ ಹೇಳಿದ್ದೇನೆ.

ಕೊಡಗು ಜಿಲ್ಲೆ ವಿರಾಜಪೇಟೆ ತಾಲ್ಲೂಕು ಶ್ರೀ ಮಂಗಲನಾಡು ಕಂಮಟೂರು ಗ್ರಾಮದ ವಿದ್ಯುದ್ದೀಕರಣದ ಬಗ್ಗೆ.

೧೭೫೪. ಶ್ರೀಮತಿ ಸುಮ ವಸಂತ (ವೀರಾಜ ಪೇಟೆ).—ಮಾನ್ಯ ವಿದ್ಯುತ್ ಗಣಿ ಹಾಗೂ ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಕೊಡಗುಜಿಲ್ಲೆ, ವಿರಾಜಪೇಟೆ ತಾಲ್ಲೂಕು ಶ್ರೀ ಮಂಗಲನಾಡು ಕಂಮಟೂರು ಗ್ರಾಮ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಗೆ ಒಳಪಟ್ಟಿದೆಯೆ.

ಆ) ಈ ಗ್ರಾಮವನ್ನು ವಿದ್ಯುದ್ದೀಕರಣ ಗೊಳಿಸುವ ಬಗ್ಗೆ ಸಮೀಕ್ಷಾ ಕಾರ್ಯ ಮಂಜೂರಾತಿ ತಾಂತ್ರಿಕ ಮಂಜೂರಾತಿ ಹಾಗೂ ವಿದ್ಯುದ್ದೀಕರಣ ಕೆಲಸ ಪ್ರಾರಂಭವಾಗಿದೆಯೆ ? ಹಾಗಿದ್ದಲ್ಲಿ ಯಾವಾಗ ಪ್ರಾಂಭಿಸಲಾಗಿಂವುದು.

ಶ್ರೀ ಜೆ. ಎಸ್. ದೇಶ್‌ಮುಖ್ (ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಆ) ಶ್ರೀ ಮಂಗಲನಾಡು ಕುಮಟೂರು ಗ್ರಾಮ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಗೆ ಒಳಪಟ್ಟಿದೆ.

ಆ) ಶ್ರೀ ಮಂಗಲನಾಡು ಕಂಮಟೂರು ಗ್ರಾಮ ದಿನಾಂಕ ೧೯-೧೦-೧೯೮೫ ರಂದು ವಿದ್ಯುದ್ದೀ ಕರಣವಾಯಿತು. ಈ ಗ್ರಾಮದಲ್ಲಿ ಇಲ್ಲಿಯವರೆಗೆ ೩೭ ಮನೆಗಳಿಗೆ ವಿದ್ಯುತ್ ಸರಬರಾಜು ಮಾಡಲಾಗಿದೆ.

ಶ್ರೀಮತಿ ಸುಮಾ ವಸಂತ.—ಯಾರು ಅವರಿಗೆ ಹಣವನ್ನು ಕೊಡುತ್ತಾರೋ ಅವರಿಗೆ ಮಾತ್ರ ವಿದ್ಯುಚ್ಛಕ್ತಿ ಸೌಲಭ್ಯವನ್ನು ಒದಗಿಸಿಕೊಡುತ್ತಿದ್ದಾರೆ. ಮತ್ತೆ, ಆ ಊರಿನಲ್ಲಿರತಕ್ಕಂತಹ ಒಂದೆರಡು ಮನೆಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಸಿ ಊರಿನ ಎಲ್ಲ ಮನೆಗಳಿಗೂ ವಿದ್ಯುಚ್ಛಕ್ತಿಯನ್ನು ಪೂರೈಸಲಾಗಿದೆ ಎಂಬುದಾಗಿ ವರದಿಯನ್ನು ಕೊಡುತ್ತಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸೂಕ್ತ ಕ್ರಮ ಕೈಗೊಳ್ಳುತ್ತಾರೆಯೇ ?

ಶ್ರೀ ಜೆ. ಎಸ್. ದೇಶ್‌ಮುಖ್.—ಅಲ್ಲಿ ಈಗಾಗಲೇ ೨೮ ಮನೆಗಳಿಗೆ ವಿದ್ಯುಚ್ಛಕ್ತಿ ಸೌಲಭ್ಯವನ್ನು ಕಲ್ಪಿಸಿಕೊಡಲಾಗಿದೆ. ಅದರಲ್ಲಿ ಏನಾದರೂ ತೊಂದರೆ ಇದ್ದರೆ, ಅದನ್ನು ವಿಚಾರಣೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಡಿ. ಎ. ಚಿನ್ನಪ್ಪ.—ನಮ್ಮ ಕಡೆ ಒಂದು ಊರಿನಲ್ಲಿ ಸಂಪೂರ್ಣ ೩೦-೪೦ ಮನೆಗಳು ಇರುತ್ತವೆ. ಅಂದರೆ ಅವುಗಳ ಅಂತರ ಸ್ವಲ್ಪ ದೂರ ದೂರದಲ್ಲಿ ಮನೆಗಳು ಇರುತ್ತವೆ. ಆದರೆ ನಿಮ್ಮ ವಿದ್ಯುಚ್ಛಕ್ತಿ ಮಂಡಲಿಯ ಅಧಿಕಾರಿಗಳು ಆ ಗ್ರಾಮದಲ್ಲಿ ಒಂದು ೮-೧೦ ಮನೆಗಳಿಗೆ ವಿದ್ಯುಚ್ಛಕ್ತಿ ಸೌಲಭ್ಯವನ್ನು ಒನಗಿಸಿ ಎಲ್ಲ ಮನೆಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿದೆ ಎಂಬುದಾಗಿ ಹೇಳಿಂ ತ್ತಾರೆ. ಆದರೆ ಅಲ್ಲಿ ಮೆಟೀರಿಯಲ್ಸ್ ಸ್ವಲ್ಪ ಹೆಚ್ಚು ಖರ್ಚು ಆಗುತ್ತದೆ. ಆದರೆ ಮಲೆನಾಡಿನ ಪ್ರದೇಶದಿಂದ ಸರ್ಕಾರಕ್ಕೆ ಹೆಚ್ಚು ಉತ್ಪಾದನೆ ಕೂಡ ಬರುತ್ತದೆ. ಆದ್ದರಿಂದ ಆ ಭಾಗಕ್ಕೆ ಸರ್ಕಾರ ಹೆಚ್ಚು ಸೌಲಭ್ಯವನ್ನು ಕಲ್ಪಿಸಿಕೊಡುವ ಬಗ್ಗೆ ಹೆಚ್ಚು ಆದ್ಯತೆಯನ್ನು ಕೊಡಬೇಕು.

ಶ್ರೀ ಜೆ. ಎಸ್. ದೇಶ್‌ಮುಖ್.—ಪಂಚಾಯಿತಿಗಳಲ್ಲಿ ಎಲ್ಲ ಮನೆಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡಬೇಕೆಂಬುದೇ ಸರ್ಕಾರದ ಉದ್ದೇಶ. ಅದರ ಬಗ್ಗೆ ಸೂಕ್ತ ಆದೇಶವನ್ನು ಆ ಭಾಗದ ಅಧಿಕಾರಿಗಳಿಗೆ ಕೊಡಲಾಗುವುದು, ತೊಂದರೆಯನ್ನು ಸರಿಪಡಿಸಲಾಗುವುದು.

ಅನಧಿಕೃತ ಸಾಗುವಳಿಯನ್ನು ಖಾಯಂಗೊಳಿಸುವ ಬಗ್ಗೆ

೧೬೩೦. ಶ್ರೀ ಬಿ. ಎನ್. ಬಚ್ಚೇಗೌಡ (ಹೊಸಕೋಟೆ).— ಮಾನ್ಯ ಕಂದಾಯ ಹಾಗೂ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಬಗುರಂ ಹುಕುಂ ಸಾಗುವಳಿ ಮೂಲಕ ಸಾಗುವಳಿ ಮಾಡುವ ರೈತರಿಗೆ ಜಮೀನನ್ನು ಖಾಯಂ ಮಾಡಿ ಸಾಗುವಳಿ ಚೀಟಿಯನ್ನು ಕೊಡಲು ಸರ್ಕಾರದವರು ತೀರ್ಮಾನ ಕೈಗೊಂಡಿದ್ದಾರೆಯೇ ?

ಆ) ತಡವಾಡಿ ಅರ್ಜಿ ಸಲ್ಲಿಸಿದವರಿಗೂ ಅವಧಿಯನ್ನು ವಿಸ್ತರಿಸಿ ಅರ್ಜಿಗಳನ್ನು ಮಾನ್ಯತೆ ಮಾಡಲಾಗುವುದೆ.

ಇ) ಬೆಂಗಳೂರು ಜಿಲ್ಲೆಯಲ್ಲಿ ಈ ರೀತಿ ಬಗುರಂ ಹುಕುಂ ಸಾಗುವಳಿಯನ್ನು ಖಾಯಂಗೊಳಿಸಲು ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ?

ಈ) ಹೊಸಕೋಟೆ ತಾಲ್ಲೂಕಿನಲ್ಲಿ ಬಗುರು ಹಕುಂ ಸಾಗುವಳಿಯನ್ನು ಖಾಯಂಗೊಳಿಸಲು ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಉಪಪ್ರಶ್ನೆ (ಅ)ಉತ್ತರದಿಂದ, ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ೩೧೯೬ ಅರ್ಜಿಗಳು.

ಈ) ೪೬೯ ಅರ್ಜಿಗಳು.

ಪ್ರಶ್ನೆ ನಂ. ೫೫೮ (೧೬೮೬) — ಸದಸ್ಯರು ಗೈರು ಹಾಜರಿ.

ಪ್ರಶ್ನೆ ನಂ. ೫೫೧ (೧೧೬೭) — ಸದಸ್ಯರು ಗೈರು ಹಾಜರಿ.

ಪ್ರಶ್ನೆ ನಂ. ೫೫೨ (೧೬೩೦)

ಶ್ರೀ ಬಿ. ಎನ್. ಬಚ್ಚೇಗೌಡ.— ಕರ್ನಾಟಕ ರಾಜ್ಯದಲ್ಲಿ ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದಂತಹವರನ್ನು ಖಾಯಂಗೊಳಿಸಲು ಸಾಕಷ್ಟು ಸದಸ್ಯರು ಅದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈಗ ಇರುವಂತಹ ಕೆ. ಎಲ್. ಆರ್. ಆಕ್ಟ್‌ನ ಸೆಕ್ಷನ್ ೯ಕ್ಕೆ ತಿದ್ದುಪಡಿಯನ್ನು ತಂದು ಯಾರು ಬಗರ್ ಹುಕುಂ ಮಾಡತಕ್ಕಂಥವರಿಗೆ ಖಾಯಂ ಮಾಡುತ್ತೇವೆಂದು ಹೇಳಿದ್ದಾರೆ. ಹಿಂದೆ ಅರ್ಜಿಯನ್ನು ಸಲ್ಲಿಸುವುದಕ್ಕೆ ಕೆಲವರಿಗೆ ಅವಕಾಶ ಇಲ್ಲದೇ ಇರುವುದರಿಂದ ಕೆಲವಾರು ಜನ ಸಕಾಲದಲ್ಲಿ ಅರ್ಜಿಯನ್ನು ಸಲ್ಲಿಸುವುದಕ್ಕಾಗಲಿಲ್ಲ. ಅವರಿಗೆ ಇನ್ನೂ ಹೆಚ್ಚಿನ ಅವಕಾಶವನ್ನು ಕೊಟ್ಟು ಅರ್ಜಿಯನ್ನು ಸಲ್ಲಿಸುವುದಕ್ಕೆ ಅವಕಾಶ ಮಾಡಿಕೊಡುತ್ತೀರ ? ಶಾಶ್ವತವಾಗಿ ಇದುವರೆವಿಗೂ ಆ ಬಗ್ಗೆ ಬಂದಿರತಕ್ಕಂಥಹ ಅರ್ಜಿಗಳಲ್ಲಿ ಹರಿಜನ-ಗಿರಿಜನರಿಗೆ ಸೇರಿದಂತಹ ಅರ್ಜಿಗಳು ಎಷ್ಟು ? ಇತರೆಯವರಿಂದ ಬಂದಿರತಕ್ಕಂತಹ ಅರ್ಜಿಗಳು ಎಷ್ಟು ಪರ್ಸೆಂಟ್ ಇವೆ ಎಂಬುದನ್ನು ತಿಳಿಸಬೇಕು. ಬೆಂಗಳೂರು ಜಿಲ್ಲೆಯಲ್ಲಿ ೩೧೯೬ ಅರ್ಜಿಗಳು ಬಂದಿವೆ ಎಂಬುದಾಗಿ ಹೇಳಿದ್ದೀರಿ. ಅದರಲ್ಲಿ ಹರಿಜನ-ಗಿರಿಜನರದ್ದು ಎಷ್ಟು, ಇತರೆಯವರದ್ದು ಎಷ್ಟು ಎಂಬುದನ್ನು ತಿಳಿಸಬೇಕು. ಅದೇ ರೀತಿ ನನ್ನ ತಾಲ್ಲೂಕಿನಲ್ಲಿ ೪೬೯ ಅರ್ಜಿಗಳು ಬಂದಿವೆ ಎಂಬುದಾಗಿ ಹೇಳಿದ್ದೀರಿ. ಅದರಲ್ಲೂ ಬೇರೆಯವರದ್ದು ಎಷ್ಟು ಹರಿಜನ-ಗಿರಿಜನರದ್ದು ಎಷ್ಟು ಎಂಬುದನ್ನು ತಿಳಿಸಂತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.— ಈಗಾಗಲೇ ನಾನು ಹೇಳಿದ ಹಾಗೆ ಸಾವಿರಾರು ಅರ್ಜಿಗಳು ಬಂದಿವೆ. ಹರಿಜನ ಗಿರಿಜನರಿಗೆ ಕೆಲವಾರು ಕಡೆ ಅರ್ಜಿಗಳನ್ನು ಕೊಟ್ಟಿಲ್ಲ. ಅವರಿಗೆ ಅವಕಾಶ ಮಾಡಿಕೊಡಬೇಕೋ ಬೇಡವೊ ಎಂಬುದರ ಬಗ್ಗೆ ವಸೂಲಿಯನ್ನು ಮುಂದೆ ಮಾಡಿದ್ದೇನೆ. ಅದು ಚರ್ಚೆಗೆ ಬಂದಾಗ